# ವಾಡೇದ ಮಂದಾರ

(ಶ್ರೀ ಬಾಳಾಸಾಹೇಬಗೌಡ ಎಂ. ಪಾಟೀಲರ ಅಭಿನಂದನ ಗ್ರಂಥ)



ಪ್ರಧಾನ ಸಂಪಾದಕರು

**ಪ್ರೊ. ಮಹಾದೇವ ಬಿ. ರೆಬಿನಾಳ**

**ಮುರುಗೇಶ ಭೀ. ಸಂಗಮ**

Scanned by CamScanner

# ಪರಿವಿಡಿ

## ಭಾಗ – ೧
## ನಮ್ಮೂರ ಗೌಡರು


೧. ಆಶೀರ್ವಾದ ವಾಣಿ ೩
• ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳು

೨. ಗೌಡಕಿಯ ಗೌರವ ಹೆಚ್ಚಿಸಿದ ಗೌಡ ಬಾಳಾಸಾಹೇಬ ೫
• ಡಾ. ಎಂ. ಜೆ. ಬಿರಾದಾರ

೩. ಸೃಜನಶೀಲ ಸಜ್ಜನಿಕೆಯ ಬಾಳಾಸಾಹೇಬಗೌಡರು ೮
• ಶ್ರೀ ವ್ಹಿ. ಎನ್. ಬಿರಾದಾರ

೪. "ನಮ್ಮೂರ "ವಾಡೇದ" ಗೌಡಕಿ ಸಂಪ್ರದಾಯದ ಚರಿತ್ರೆ" ೧೩
• ರಾಜಶೇಖರ ಎಸ್. ಬಿರಾದಾರ

೫. ಗುಣಗೌರವದ ಶ್ರೀ ಬಾಳಾಸಾಹೇಬಗೌಡರು ೨೫
• ಪ್ರೊ. ಬಿ. ಬಿ. ಡೆಂಗನವರ

೬ "ಬಬಲೇಶ್ವರದ ಭಾಗ್ಯ ಬಾಳಾಸಾಹೇಬರು" ೩೬
• ಪ್ರೊ. ಮಹಾದೇವ ಬಿ. ರೆಬಿನಾಳ

೭ ವಾಡೇದ ಮಂದಾರ ೩೯
• ಮುರುಗೇಶ ಸಂಗಮ

೮. ಶ್ರೀ ಬಾಳಾಸಾಹೇಬಗೌಡ ಪಾಟೀಲರು ನಾನು ಕಂಡಂತೆ ೪೩
• ಡಾ. ವ್ಹಿ. ಆರ್. ಚೌಧರಿ

೯. ಗೌಡರ ಮಾತು ಮಲ್ಲಿಗೆ ೪೬
• ಡಾ. ವಿಜಯಕುಮಾರ ಎಸ್. ಶೇಕದಾರ

೧೦. 'ಬಹಿರಂಗ – ಅಂತರಂಗ ಶುದ್ಧಿ' ೪೯
• ಡಾ. ಎ. ಡಿ. ಐಹೊಳ್ಳಿ

೧೧. ನಮ್ಮ ಬಾಳಾಸಾಹೇಬ ಗೌಡರು ೫೨
• ಸುಭಾಸ ಯಾದವಾಡ




Scanned by CamScanner

೧೨. ಬಹುಮುಖ ವ್ಯಕ್ತಿತ್ವದವರು ೫೬
- ಎ. ಸಿ. ನಾಗಠಾಣ

೧೩. ಅಜಾತಶತ್ರು ೫೮
- ಶ್ರೀಮತಿ ಗುರುಬಾಯಿ ಶಾಂತವೀರ ತೊಗರಿ

೧೪. ಅಪ್ಪಟ ಗಾಂಧೀವಾದಿ ಬಬಲೇಶ್ವರದ ಶ್ರೀ ಬಿ.ಎಂ. ಪಾಟೀಲರು ೬೨
- ಎಸ್. ಎ. ಜಿದ್ದಿ

೧೫. ಗ್ರಾಮಾಭಿವೃದ್ಧಿಯ ಹರಿಕಾರರು ೬೫
- ಅರ್ಜುನ ಬಸಪ್ಪ ಬೂದಿಹಾಳ

೧೬ ಮಾತೃ ಹೃದಯಿಗಳು ೭೨
- ವಿನೋದಾ ಮೋಹನ ನಾಡಗೌಡ

೧೭ ನನ್ನ ಬಾಬಾ ೭೬
- ಬಸನಗೌಡ ಬಾಳಾಸಾಹೇಬಗೌಡ ಪಾಟೀಲ

೧೮. ದೇವತಾ ಸ್ವರೂಪಿಗಳು ೭೭
- ಮಂದಾಕಿನಿ. ಎಮ್. ಗದಗ

೧೯. ಶಿಸ್ತಿನ ಸಿಪಾಯಿಗಳು ೭೯
- ಆಶಾಲತಾ ಎನ್. ಪಾಟೀಲ

೨೦. ಸಾಧಕ ಬಾಳಾಸಾಹೇಬಗೌಡರು ೮೧
- ಬ. ಶಂ. ಯಾದವಾಡ

೨೧. ಮಹಾನುಭಾವರು ೮೬
- ಶೈಲಜಾ ಕುಲಕರ್ಣಿ

೨೨. "ಸರಳ ನಡೆ–ನುಡಿಯ ಸರದಾರ" ೮೮
- ಡಾ. ಜಿ. ಆರ್. ತಮಗೊಂಡ

೨೩. ಸುಜನರನ್ನು ಸೃಷ್ಟಿಸಿದ ಬಾಳಾಸಾಹೇಬಗೌಡರು ೯೦
- ದೇವಾನಂದ ಅಲಗೊಂಡ

೨೪. ನಮ್ಮ ಅಚ್ಚುಮೆಚ್ಚಿನ ಬಾಳಾಸಾಹೇಬಗೌಡರು ೯೨
- ರೇವಣೆಪ್ಪ ಬಸಪ್ಪ ಜಂಗಮಶೆಟ್ಟಿ

೨೫. ಪುಣ್ಯಕೋಟಿ ೯೪
- ಪ್ರೊ. ಶಿವಾನಂದ ಕಲ್ಯಾಣಿ



Scanned by CamScanner

# ಗುಣಗೌರವದ ಶ್ರೀ ಬಾಳಾಸಾಹೇಬಗೌಡರು

• ಪ್ರೊ. ಬಿ. ಬಿ. ಡೆಂಗನವರ

ಬಬಲೇಶ್ವರ ಇತ್ತ ಹಳ್ಳಿಯು ಅಲ್ಲ; ಅತ್ತ ಪಟ್ಟಣವೂ ಅಲ್ಲ; ಎರಡನ್ನು ಸಮೀಕರಿಸಿಕೊಂಡು ದಿನ ದಿನಕ್ಕೆ ಪ್ರಗತಿ ಪಥದತ್ತ ದಾಪುಗಾಲು ಇಡುತ್ತಿದೆ. ವಿಜಯಪುರದಿಂದ ದಕ್ಷಿಣಕ್ಕೆ ೨೨ ಕಿಲೋ ಮೀಟರ ಅಂತರದಲ್ಲಿ ಜಮಖಂಡಿ, ಧಾರವಾಡ, ಬೆಳಗಾವಿಗೆ ಹೋಗುವ ದಾರಿಯಲ್ಲಿ ಬಬಲೇಶ್ವರ ಪಟ್ಟಣವಿದೆ. ಇತ್ತೀಚೆಗೆ ತಾಲೂಕಾಗಿ ರೂಪಗೊಂಡಿದೆ. ಜೊತೆಗೆ ವಿಧಾನಸಭಾ ಕ್ಷೇತ್ರವೂ ಕೂಡ ಆಗಿದೆ.

ಬಬಲೇಶ್ವರ ಗುರುಪಾದೇಶ್ವರ ಬೃಹನ್ಮಠ ಹಾಗೂ ಪರಮಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳ ತಪೋಭೂಮಿ ಹಾಗೂ ಪುಣ್ಯಕ್ಷೇತ್ರವಾಗಿದೆ. ಹಲವಾರು ಕಾರಣಗಳಿಂದ ಬಬಲೇಶ್ವರ ತುಂಬಾ ಹೆಸರುವಾಸಿಯಾಗಿದೆ.

ವಿಳ್ಯದೆಲೆ ಕಾರಣಗಳಿಂದ ಕೂಡಾ ಖ್ಯಾತಿಹೊಂದಿದ ಹಾಗೆನೆ ಬಬಲೇಶ್ವರದ ಗೌಡರ ಮನೆತನವು ಐತಿಹಾಸಿಕವಾಗಿಯೂ ಹಾಗೂ ಚಾರಿತ್ರಿಕವಾಗಿಯೂ ಜನರ ಗಮನ ಸೆಳೆದಿದೆ. ಈ ಮನೆತನದ ಪರಂಪರೆ ಕುರಿತು ಒಂದರೆಡು ವಿಚಾರಗಳನ್ನು ಕುರಿತು ಬರೆಯುವ ಸಂದರ್ಭ ನನಗೀಗ ಒದಗಿ ಬಂದಿದೆ. ಬಾಳಾಸಾಹೇಬಗೌಡರು ಹಾಗೂ ಅವರ ಕುಟುಂಬದ ಕುರಿತು ನಾನು ಕಂಡಂತೆ, ಕಂಡಷ್ಟು ಈ ಲೇಖನದಲ್ಲಿ ಅಭಿವ್ಯಕ್ತಗೊಳಿಸುತ್ತಿದ್ದೇನೆ. ತುಂಬಾ ಅಪರೂಪದ ಮನೆತನ. ಆಡಳಿತ ದೃಷ್ಟಿಯಿಂದ ಗ್ರಾಮಗಳಲ್ಲಿ ಗೌಡಕಿ ಮನೆತನಗಳಿದ್ದವು ಅವುಗಳಲ್ಲಿ ಒಂದು ಮಾಲಿಪಾಟೀಲ; ಮತ್ತೊಂದು ಪೋಲಿಸ್ ಪಾಟೀಲ; ಎಂಬ ಎರಡು ಮನೆತನಗಳಿದ್ದವು. ಮಾಲಿಪಾಟೀಲರು ಊರಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಮಾಡುತ್ತಿದ್ದರೆ, ಪೋಲಿಸ್ ಪಾಟೀಲರು ಕಾನೂನು ವ್ಯವಸ್ಥೆ ಕಾಪಾಡುವ ಕಾರ್ಯಮಾಡುತ್ತಿದ್ದರು. ಬಬಲೇಶ್ವರ ಗೌಡರ ಮನೆತನಕ್ಕೆ ಎರಡು ಊರಿನ ಗೌಡಕಿ ಇದೆ. ಬಬಲೇಶ್ವರ ಹಾಗೂ ಅಡವಿಸಂಗಾಪುರ ಈ ಎರಡು ಊರಿನ ಗೌಡಕೆಯ ಜವಾಬ್ದಾರಿ ಬಬಲೇಶ್ವರ ಗೌಡರಿಗಿದೆ. ಮುಲ್ಕಿ ಪೋಲಿಸ ಗೌಡಕಿ ಕೂಡಾ ಇವರ ಮನೆತನಕ್ಕಿದೆ. ರಾಜರ



Scanned by CamScanner

ಕಾಲದಲ್ಲಿಯೂ ಮತ್ತು ಬ್ರಿಟಿಷರ ಕಾಲದಲ್ಲೂ ಎರಡು ಅಧಿಕಾರಗಳನ್ನು ಕೊಟ್ಟು ಉಂಬಳಿಯಾಗಿ ಎರಡು ಸಾವಿರ ಎಕರೆ ಜಮೀನು ನೀಡಲಾಗಿದೆ. ಅದರಲ್ಲಿ ೨ಳ ವಾಲಿಕಾರರಿಗೆ ಎರಡೆರಡು ಹೊಲ ಕೊಟ್ಟು ಅವರು ಗೌಡರ ಕೈಯಲ್ಲಿ ವಾಲಿಕಾರಿಕೆ ಮಾಡಬೇಕಾಗಿತ್ತು. ಕೋರಬು ಎಂಬ ಮನೆತನಕ್ಕೆ ಎರಡು ಹೊಲ ಕೊಟ್ಟು ಅವರ ಊರಿನ ದನಕರುಗಳಿಗೆ ನೀರು ಕುಡಿಸುವ ವ್ಯವಸ್ಥೆ ನೋಡಿಕೊಳ್ಳಬೇಕು. ಎರಡು ಹೊಲಗಳನ್ನು ಹಲಿಗೆ ಬಾರಿಸುವ ಕಾಯಕದವರಿಗೆ ಕೊಡಲಾಗಿತ್ತು. ಇನ್ನೊಂದು ಹೊಲವನ್ನು ಕೊಂಬು ಊದುವವರಿಗೆ ಕೊಡಲಾಗಿತ್ತು. ಗೌಡರ ಮನೆಯ ಕಾರ್ಯಕ್ರಮಗಳಲ್ಲಿ ಇವರು ಶೋಭೆ ತರುತ್ತಾರೆ. ಐದು ಹೊಲಗಳನ್ನು ಇವರ ಮನೆಗಳಿಗೆ ಬಂಗಾರವಸ್ತುಗಳನ್ನು ಮಾಡಲು ಪತ್ತಾರನಿಗೆ ಕೊಟ್ಟಿದ್ದರಂತೆ. ಹೀಗೆ ತಮಗೆ ಉಂಬಳಿಯಲ್ಲಿ ಬಂದ ಹೊಲಗಳನ್ನು ಹಂಚಿ ತಮಗೆ ಐದುನೂರು ಎಕರೆ ಜಮೀನುಗಳನ್ನು ಇಟ್ಟುಕೊಂಡು ಅದ್ದೂರಿಯಿಂದ ಗೌಡಕಿಮಾಡುವ ಮನೆತನ ದರ್ಪ, ದುಮ್ಮಾನ, ಶಕ್ತಿಪ್ರದರ್ಶನವಿಲ್ಲದ ಗೌಡಕಿ ಇವರದು, ದಯೆ, ಕರುಣೆ, ಪ್ರಜಾಹಿತ ಕಾರ್ಯಗಳಿಂದ ಜನಬೆಂಬಲ ಪಡೆದ ಗೌರವದ ಮನೆತನ. ಇವರ ಮನೆ ಮೂರು ಅಂತಸ್ತುಗಳುಳ್ಳ ಮೈಸೂರು ಅರಮನೆ ಮಾದರಿಯಲ್ಲಿ ಇತ್ತು. ಅದನ್ನು ಎಲ್ಲರೂ ವಾಡೆ ಎಂದು ಕರೆಯುತ್ತಿದ್ದರು. ಈ ಮನೆತನದ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿಲ್ಲವಾದರೂ ಆ ಮನೆತನದವರು ಹೇಳುತ್ತಾ ಬಂದ ಮಾತುಗಳ ಮೂಲಕ ಗೌಡರ ಮನೆತನದ ಬಗ್ಗೆ ಅರಿಯಬಹುದಾಗಿದೆ. ಮಲ್ಲನಗೌಡರ ತಂದೆಯವರಾದ ವೀರನಗೌಡರಿಂದ ಹಿಡಿದು ಇತ್ತೀಚಿನವರೆಗೆ ಮಾಹಿತಿ ಸಿಗುತ್ತದೆ. ವೀರನಗೌಡರ ಮಗ–ಮಲ್ಲನಗೌಡ–ಮಲ್ಲನಗೌಡರ ಮಕ್ಕಳಾದ ವೀರನಗೌಡ, ಹಾಗೂ ಬಾಳಾಸಾಹೇಬಗೌಡ ಮತ್ತು ಲಿಂಗನಗೌಡ ಎಂಬ ಒಟ್ಟು ಮೂರು ಜನ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳಾದ ಪಾರ್ವತಿದೇವಿ, ಗಂಗಾಬಾಯಿ, ಸುಂದರಾಬಾಯಿ, ಶಾಂತಾಬಾಯಿ, ಸುಶೀಲಾಬಾಯಿ, ಇಂದ್ರಬಾಯಿ ಮತ್ತು ವಿಮಲಾಬಾಯಿ ಹೀಗೆ ಮಲ್ಲನಗೌಡರಿಗೆ ಒಟ್ಟು ಮೂರುಜನ ಗಂಡು ಮಕ್ಕಳು, ಏಳುಜನ ಹೆಣ್ಣುಮಕ್ಕಳು ಸೇರಿ ಒಟ್ಟು ಹತ್ತುಜನ ಮಕ್ಕಳು ಇದೊಂದು ತುಂಬಿದ ಕುಟುಂಬ. ಬಬಲೇಶ್ವರ ಆಸುಪಾಸು ಸುಮಾರು ಐವತ್ತು ಕಿ. ಮೀ. ವ್ಯಾಪ್ತಿಯಲ್ಲಿ ಅತ್ಯಂತ ಗೌರವಾನ್ವಿತ ಹೆಸರುವಾಸಿಯಾದ ಮನೆತನ ಇಂತಹ ಅಪರೂಪದ ಗೌಡರ ಮನೆತನದಲ್ಲಿ ಮಲ್ಲನಗೌಡರಿಗೆ ಒಬ್ಬ ಚೊಚ್ಚಲ ಗಂಡು ಮಗ ವೀರನಗೌಡರು ಜನಿಸಿದ ನಂತರ ಐದು ಜನ ಹೆಣ್ಣು ಮಕ್ಕಳು ಜನಿಸಿದರು. ಆದರೆ ಬಹು ದಿನಗಳವರೆಗೆ ಮಲ್ಲನಗೌಡರಿಗೆ ಮಕ್ಕಳಾಗಲಿಲ್ಲ, ಒಬ್ಬ ಗಂಡು ಮಗನ ಜನನದಿಂದ ಸಮಾಧಾನವಾಗಲಿಲ್ಲ, ಇನ್ನೂ ಗಂಡು ಸಂತತಿ ಬೇಕೆನಿಸಿತು, ಬಬಲೇಶ್ವರ ಪಕ್ಕದ ಹಲಗಣಿ ಹನುಮಪ್ಪನಿಗೆ ಹರಿಕೆಹೊತ್ತು ಒಬ್ಬ ಗಂಡು ಮಗ ಐದು ಜನ ಹೆಣ್ಣು ಮಕ್ಕಳ ನಂತರ ಏಳನೆಯವರಾಗಿ ಬಾಳಾಸಾಹೇಬಗೌಡರ ಜನನವಾಗುತ್ತದೆ.



Scanned by CamScanner

ಬಲಭೀಮನ ಆಶೀರ್ವಾದದ ಫಲವಾಗಿ ಅಜಾನುಬಾಹು ವ್ಯಕ್ತಿತ್ವದ, ದೃಢಕಾಯದ ಬಾಳಾಸಾಹೇಬಗೌಡರು ಶ್ರೀ ಮಲ್ಲನಗೌಡ ಹಾಗೂ ಶ್ರೀಮತಿ ಕೃಷ್ಣಾಬಾಯಿ ದಂಪತಿಗಳ ಉದರದಲ್ಲಿ ದಿನಾಂಕ : ೦೫-೧೧-೧೯೩೭ರಲ್ಲಿ ಶ್ರೀ ಬಾಳಾಸಾಹೇಬಗೌಡರ ಜನ್ಮ ಧಾರಣೆಯಾಗುತ್ತದೆ.

ಇವರ ತಂದೆ-ತಾಯಿಯವರ ಅತ್ಯಂತ ಪ್ರೀತಿಯ ಮಗನಾಗಿ ಎಲ್ಲ ಸಹೋದರ ಸಹೋದರಿಯರ ಅಚ್ಚು-ಮೆಚ್ಚಿನ ತಮ್ಮನಾಗಿ, ಅಣ್ಣನಾಗಿ ತಂದೆಯ ಕರುಣೆಯ ತಾಯಿಯ ವಾತ್ಸಲ್ಯದಿಂದ ಬೆಳೆದು ದೊಡ್ಡವರಾದ ಮೇಲೆ ಮನೆತನದ ಜವಾಬ್ದಾರಿಗಳು ಅತ್ಯಂತ ಕಿರಿಯ ವಯಸ್ಸಿನಲ್ಲಿಯೆ ಇವರ ಹೆಗಲಿಗೇರುತ್ತವೆ.

ಒಲವು ಪ್ರೀತಿ ಮತ್ತು ವಿಶ್ವಾಸ ಎಲ್ಲಿರುತ್ತದೆಯೊ ಅಲ್ಲಿ ಬದುಕಿನ ಸ್ಥರಗಳು ಗಟ್ಟಿಯಾಗುತ್ತಾ ಹೋಗುತ್ತವೆ. ಆ ಗಟ್ಟಿತನವು ಪರಿಸರದ ಮೂಲಕ ಮತ್ತು ಅನುವಂಶಿಕತೆಯಿಂದಲೂ ಬೆರೆಯುತ್ತಾ ಹೋಗಿ ಉದಾರತನವು ವ್ಯಾಪಕವಾಗುತ್ತಾ ಹೋಗುತ್ತದೆ. ಅದರಿಂದ ಮೌಲಿಕವಾದ ಗುಣಗಳು ಆಂತರಿಕವಾಗಿ ಚಿಗುರೊಡೆಯುತ್ತ ಬಾಹ್ಯವಾಗಿ ಫಲವನ್ನು ನೀಡುತ್ತಾ ಹೋಗುತ್ತವೆ. ಹೀಗಾಗಿ ವ್ಯಕ್ತಿ ವ್ಯಕ್ತಿಯಾಗಿ ಬೆಳೆಯದೆ ಸಮಷ್ಟಿಯಾಗಿ ಅಭಿವೃದ್ಧಿಯನ್ನು ಸಾಧಿಸುತ್ತಾ ಹೋಗಿ ತನ್ನ ತನವನ್ನು ಮರೆಯುತ್ತ ಹೋಗುತ್ತಾನೆ. ಆ ಮರೆವು ಅರಿವಿನ ಆಗಸದಲ್ಲಿ ತೇಲಾಡುತ್ತ ಸಮರ್ಪಣಾ ಭಾವದಿಂದ ಸಮಾಜ ಮುಖಿಯಾಗಿ ಬೆಳೆಯುತ್ತಾರೆ. ಅಂತಹ ಸಾಲಿನಲ್ಲಿ ನಿಲ್ಲುವವರು ಬಾಳಾಸಾಹೇಬಗೌಡರು.

ವ್ಯಕ್ತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳು. ಒಂದರ ಹಿತ ಇನ್ನೊಂದಕ್ಕೆ ಪ್ರೇರಕ ಮತ್ತು ಪೂರಕ ಈ ಕಾರಣಕ್ಕಾಗಿಯೇ ವ್ಯಕ್ತಿ ಮತ್ತು ಸಮಾಜದ ಸಂಬಂಧ ಗಟ್ಟಿಯಾಗಿ ಬೆಳೆಯುತ್ತಿರುತ್ತದೆ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಕಾಯಕದಲ್ಲಿ ನಿರತನಾದೊಡೆ ಜಂಗಮ ಮುಂದಿದ್ದರೂ ಹಂಗುಹರಿಯಬೇಕು ಎಂಬ ಶರಣರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡ ಶರಣಜೀವಿ ಬಾಳಾಸಾಹೇಬಗೌಡರು ಸಮಾಜದ ವಿವಿಧ ಅಂಗಗಳಾದ ಸಂಸ್ಕೃತಿ, ಧರ್ಮ, ಶಿಕ್ಷಣ, ಕಲೆ, ಸಾಹಿತ್ಯ, ಸಂಗೀತಕ್ಕೆ ಇವರು ಕೊಟ್ಟ ಕೊಡುಗೆ ಗಮನಾರ್ಹವಾದದ್ದು. ವ್ಯಷ್ಟಿಹಿತಕ್ಕಿಂತ ಸಮಷ್ಟಿಹಿತಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟು ಸಮಾಜದ ಸರ್ವತೋಮುಖ ವೃದ್ಧಿಗಾಗಿ ಹಗಲಿರುಳು ಪರಿಶ್ರಮಪಟ್ಟಿದ್ದಾರೆ. ಪರಿಶುದ್ಧ ಬದುಕಿನ ಸರಳ ಮತ್ತು ಸಹಜ ಜೀವನಶೈಲಿಯಲ್ಲಿ ನಡೆದುಬಂದವರು ತ್ಯಾಗ, ಕಾಯಕ, ಮಾನವೀಯತೆ, ಸಾಮಾಜಿಕ ಕಳಕಳಿ ಹೊಂದಿರುವ ಉದಾತ್ತ ಮೌಲ್ಯಗಳನ್ನು ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬಂದವರು.

ಮಗುವಿನಂತೆ ಮನಸ್ಸು, ಮಧುರವಾದ ಮಾತು, ಎಲ್ಲರ ಏಳಿಗೆಯನ್ನು ಬಯಸುವ ವಿಶಾಲವಾದ ಹೃದಯ, ನಂಬಿಕೊಂಡು ಬಂದ ತತ್ತ್ವ-ಸಿದ್ಧಾಂತ



Scanned by CamScanner

ನೈತಿಕ ಮೌಲ್ಯಗಳನ್ನು ಮೈಗೂಡಿಸಿಕೊಂಡು ಸಾರ್ಥಕ ಬದುಕಿನ ಸಾಕಾರಮೂರ್ತಿ ಮುತ್ಸದ್ಧಿ ಆಡಳಿತಗಾರ ಹಾಗೂ ಸೌಜನ್ಯಶೀಲ ಶ್ರೀ ಬಾಳಾಸಾಹೇಬಗೌಡರು ನಯ-ವಿನಯ ಸಂಪನ್ನರಾದ ವ್ಯಕ್ತಿ.

ದ್ವೇಷಾಸೂಯೆಗಳಿಲ್ಲದ, ಮೋಸ ವಂಚನೆಗಳಿಲ್ಲದ ಪರಿಶುದ್ಧ ಹೃದಯದ ಸಂಯಮಶೀಲ, ಸರ್ವಾರ್ಪಣ ಮನೋಭಾವದಿಂದ ಜನ ಸೇವೆ ಮಾಡುವ "ಜನಸೇವೆಯೆ ಜನಾರ್ಧನಸೇವೆ" ಹಾಗೂ ಸದುವಿನಯವೆ ಸದಾಶಿವನ ಒಲುಮೆಯಯ್ಯ ಎಂಬ ಬಸವ ವಾಣಿಗೆ ಭೂಷಣ ಪ್ರಾಯರಾದವರು ಬಾಳು ಬೆಳಗಿದ ಮಹಾನುಭಾವರು ಶ್ರೀ. ಬಾಳಾಸಾಹೇಬ ಗೌಡರು.

ಶ್ರೀ. ಬಾಳಾಸಾಹೇಬ ಗೌಡರು ಪ್ರಾಪ್ತವಯಸ್ಕರಾದ ಮೇಲೆ ಅಂದರೆ ಅವರ ಇಪ್ಪತ್ತನಾಲ್ಕನೇ ವಯಸ್ಸಿಗೆ ಮದುವೆ ನಿಶ್ಚಿತಾರ್ಥವಾಗುತ್ತದೆ. ವಿಜಯಪುರ ತಾಲೂಕಿನ ಬಾಬಾನಗರದ ಪ್ರತಿಷ್ಠಿತ ಸುಸಂಸ್ಕೃತ ಗೌಡರ ಮನೆತನದ ಶ್ರೀ. ಸಂಗನಗೌಡ ಚಂದ್ರಾಬಾಯಿ ಇವರ ಮುದ್ದಿನ ಮಗಳಾದ ಶ್ರೀಮತಿ. ಗಂಗಾಬಾಯಿ ಗೌಡತಿಯೊಂದಿಗೆ ಮದುವೆಯಾಗುತ್ತದೆ. ಅವರ ದಾಂಪತ್ಯ ಜೀವನ ಅತ್ಯಂತ ಸುಖಮಯವಾಗಿ ಸಾಗುತ್ತದೆ. ಬಾಳಾಸಾಹೇಬ ಗೌಡರ ಉನ್ನತಿಗೆ ಬೆಂಗಾವಲಾಗಿ ಶ್ರೀರಕ್ಷೆಯಾಗಿ ಬೆನ್ನೆಲುಬಾಗಿ ಗಂಗಾಬಾಯಿಯವರು ಬಾಳನೌಕೆಯನ್ನು ಅತ್ಯಂತ ಸುಗಮವಾಗಿ ಸುರಕ್ಷಿತವಾಗಿ ದಡ ಸೇರುವಲ್ಲಿ ಅವಿರತವಾಗಿ ಪರಿಶ್ರಮಿಸುತ್ತಾರೆ. ಯಶಸ್ವಿ ಒಬ್ಬ ಪುರುಷನ ಹಿಂದೆ ಮಹಿಳೆ ಇರುತ್ತಾಳೆ ಎನ್ನುವುದಕ್ಕೆ ಗಂಗಾಬಾಯಿ ಗೌಡತಿಯವರೆ ನಿದರ್ಶನವಾಗಿದ್ದಾರೆ. ದೇವರದಾಸಿಮಯ್ಯ ಹೇಳುವ ಹಾಗೆ ಸತಿ-ಪತಿಗಳೊಂದಾದ ಭಕ್ತಿ ಶಿವಂಗೆ ಹಿತವಾಗಿಪ್ಪುದು ಎನ್ನುವಂತೆ ಸಾಮರಸ್ಯದಿಂದ ಬಾಳಿ ಬದುಕಿ ಆದರ್ಶದಂಪತಿಗಳೆಂಬ ಹೆಗ್ಗಳಿಕೆಗೆ ಬಾಜನರಾದವರು. ಇವರದು ಕೃಷಿಕ ಕುಟುಂಬ. ಬಬಲೇಶ್ವರ ಗೌಡರ ಮನೆಯ ಸೊಸೆಯಾಗಿ ಮಹಾಲಕ್ಷ್ಮಿಯಂತೆ ಬಂದು ಅವರ ಮನೆ ಬೆಳಗಿದ ಮಹಾಮಾತೆ ಶ್ರೀಮತಿ ಗಂಗಾಬಾಯಿ ಗೌಡತಿ ಇವರ ಮದುವೆಯಲ್ಲಿ ಗೌಡತಿ ಸೋದರ ಮಾವನವರಾದ ತುಂಗಳಗೌಡರಾದ ಶ್ರೀ. ಗುರುಸಿದ್ಧಪ್ಪಗೌಡ ಪಾಟೀಲ ಇವರು ಏಳು ಹೊಲಗಳನ್ನು ಅಂದರೆ ಸುಮಾರು ಇನ್ನೂರು ಎಕರೆ ಜಮೀನನ್ನು ತಮ್ಮ ಸೊಸೆಗೆ ಮದುವೆಯಲ್ಲಿ ಉದಾರ ಹಸ್ತದಿಂದ ಪ್ರೀತಿಯಿಂದ ಸೊಸೆಗೆ ಉಡುಗೊರೆಯಾಗಿ ನೀಡಿದರು. ಇದೊಂದು ಅಪರೂಪದ ಅವಿಸ್ಮರಣೀಯ ಘಳಿಗೆ ಎಂದೆ ಹೇಳಬಹುದು. ಇದರಿಂದ ಬಬಲೇಶ್ವರದ ಗೌಡರಿಗೆ ಆರ್ಥಿಕಬಲ ಬಂದಂತಾಯಿತು. ಹೀಗೆ ಗಂಗಾಬಾಯಿ ಗೌಡತಿಯ ಆಗಮನದಿಂದ ಬಬಲೇಶ್ವರದ ಗೌಡರ ಮನೆಯು ಸಂಪತ್ತಿನ ಆಗರವಾಯಿತು. ಮಹಾಲಕ್ಷ್ಮಿಯ ಆವಾಸ್ಥಾನವಾಯಿತು. ಹೀಗೆ ಬಬಲೇಶ್ವರ ಗೌಡರ ಮನೆ ತುಂಬಿದ ಶ್ರೀಮತಿ. ಗಂಗಾಬಾಯಿ ಗೌಡತಿಯವರು ಬಹಳ ಬುದ್ಧಿವಂತ, ಚಾಣಾಕ್ಷ ಹೆಣ್ಣುಮಗಳು



Scanned by CamScanner

ಗೌಡರ ಮನೆಯ ಎಲ್ಲ ಕ್ರೀಯಾ ಚಟುವಟಿಕೆಗಳನ್ನು ತೀಕ್ಷ್ಣವಾಗಿ ಗಮನಿಸುತ್ತ ಗೌಡರ ಮನೆಯ ಘನತೆ ಗೌರವಗಳನ್ನು ಹೆಚ್ಚಿಸುತ್ತ ಸಮಾಜದ ಸ್ತುತಿ ನಿಂದೆಗಳಿಗೆ ಕಿವಿಗೊಡದೆ ಗೌಡರ ಮನೆಯ ಪ್ರಗತಿಗೆ ಸದಾ ಹಂಬಲಿಸುವ ಧೀರಧೀಮಂತ ಮಹಿಳೆಯಾಗಿದ್ದಳು. ಮಹಾತಾಯಿ ಹಗಲಿರುಳು ಬಾಳಾಸಾಹೇಬ ಗೌಡರ ಹಿತಚಿಂತನೆ ಹಾಗೂ ಅವರ ಶ್ರೇಯೋಭಿವೃದ್ಧಿಗೆ ಕಂಕಣ ಬದ್ಧರಾಗಿ ಟೊಂಕಕಟ್ಟಿ ನಿಂತವರು.

ಶ್ರೀ ಬಾಳಾಸಾಹೇಬ ಗೌಡರ ವ್ಯಕ್ತಿತ್ವವು ಕೂಡ ಅಷ್ಟೆ ಎತ್ತರವಾಗಿತ್ತು. ನೋಡಲು ಎತ್ತರದ ನಿಲುವು ಅಜಾನುಬಾಹು ವ್ಯಕ್ತಿತ್ವ, ಸದಾ ಬಿಳಿ ಶುಭ್ರವಾದ ನೆಹರು ಶರ್ಟು, ಶುಭ್ರವಾದ ಬಿಳಿ ದೋತುರ, ತಲೆಯ ಮೇಲೆ ಶುಭ್ರವಾದ ಬಿಳಿ ಗಾಂಧಿ ಟೋಪಿ ಧರಿಸಿ ಮನೆಯಿಂದ ಹೊರಟರೆ ರಾಜ ಗಾಂಭೀರ್ಯ ಮುಖದ ಮೇಲೆ ಸಾತ್ವಿಕ ಕಳೆ ಕರುಣೆ ತುಂಬಿದ ಕಣ್ಣು, ಪ್ರೀತಿ ವಾತ್ಸಲ್ಯದಿಂದ ತುಂಬಿದ ಹೃದಯ ಯಾರು ನೋಡಿದರು ಇವರ ಬಗ್ಗೆ ಗೌರವ ತರುವ ನಡೆ ಇವರು ಹೋಗುವಾಗ ದಾರಿಯುದ್ದಕ್ಕೂ ಕಿರಿಯರಿಂದ ಹಿರೆಯರೆಲ್ಲರೂ ಎದ್ದುನಿಂತು ಕೈಮುಗಿಯುವುದನ್ನು ನೋಡಿದರೆ, ಇವರ ವ್ಯಕ್ತಿತ್ವದ ಪರಿಚಯವಾಗುತ್ತದೆ. ನಾನು ಪ್ರೌಢಶಾಲೆಯಲ್ಲಿ ಓದುವಾಗ ಗೌಡರು ಹೋಗುವಾಗ ಜನರು ಇವರನ್ನು ಗೌರವಿಸುವ ರೀತಿಯನ್ನು ನೋಡಿದ ನನಗೆ ಆಶ್ಚರ್ಯವಾಗುತ್ತಿತ್ತು. ಏನಪ್ಪ ಎಂತಹ ಗೌರವ, ಮರ್ಯಾದೆ ಇಂತಹ ಗೌಡಕಿಯ ಮನೆತನವನ್ನೆ ನಾನು ಜೀವಮಾನದಲ್ಲಿಯೆ ಕಂಡಿಲ್ಲ ಅನಿಸುತ್ತದೆ. ಇದು ಸುಮ್ಮನೆ ಅವರ ಮೇಲಿನ ಅಭಿಮಾನಕ್ಕಾಗಿ ಹೇಳುವ ಮಾತಲ್ಲ ನಾನು ಪ್ರತ್ಯಕ್ಷ ಕಣ್ಣಾರೆ ಕಂಡ ದೃಶ್ಯವಿದು. ಬಾಳಾಸಾಹೇಬ ಗೌಡರು ಮನೆಯಿಂದ ಹೊರಟರೆಂದರೆ ಅವರು ಪಂಚಾಯತಿಗೆ ಹೋಗಲಿ, ವಿಜಯಪುರಕ್ಕೆ ಹೋಗಲಿ ಇಲ್ಲವೆ ಅನ್ಯ ಯಾವುದೇ ಕಾರ್ಯಕ್ಕೆ ಹೊರಟರೆಂದರೆ ಅವರ ಎದುರಿಗೆ ಎಂಥಹ ದೊಡ್ಡ ವ್ಯಕ್ತಿಯೂ ಬರುತ್ತಿರಲಿಲ್ಲ. ದಾರಿಯುದ್ದಕ್ಕೂ ಅವರು ಹೋಗುವಾಗ ಎಲ್ಲರೂ ಎದ್ದುನಿಂತು ಅವರಿಗೆ ಗೌರವ ಸಲ್ಲಿಸುತ್ತಿದ್ದರು, ಅವರ ಭಯದಿಂದ ಅಲ್ಲ ಅವರ ಮೇಲಿನ ಅಭಿಮಾನದಿಂದ, ಗೌರವದಿಂದ ಜನ ಅವರನ್ನು ನೋಡುತ್ತಿದ್ದರು. ಅವರು ಕೂಡ ಹಾಗೆಯೆ ದಾರಿಯಲ್ಲಿ ಹೋಗುವಾಗ ಯಾರನ್ನೂ ಕಣ್ಣೆತ್ತಿ ನೋಡುತ್ತಿರಲಿಲ್ಲ. ಬಡವ–ಬಲ್ಲಿದ ಎನ್ನುವ ತಾರತಮ್ಯ ಅವರ ಬಳಿ ಸುಳಿಯಲೆ ಇಲ್ಲ. ಅತ್ಯಂತ ಸರಳ, ಸಹಜ ಸೌಜನ್ಯಶೀಲ ಗುಣಗ್ರಾಹಿಗಳಾಗಿದ್ದರು.

ಬಬಲೇಶ್ವರ ಜನರು ಬಾಳಾಸಾಹೇಬ ಗೌಡರಿಗೆ ಸಲ್ಲಿಸುವಂತ ಗೌರವವನ್ನು ನಾನು ಇವತ್ತಿಗೂ ಅಂತಹ ಸನ್ನಿವೇಶವನ್ನು ಕಂಡಿಲ್ಲ. ನಿಜವಾಗಿಯೂ ಅದೊಂದು ಅಪರೂಪದ ಗೌಡಕಿಯ ಮನೆತನವೆಂದು ಹೇಳಬಹುದು. ಸಾಕಷ್ಟು ಸಿರಿವಂತ, ಆಸ್ತಿವಂತ, ದೇಸಗತಿ ಮನೆತನಗಳು ಇವೆ. ಆದರೆ ಬಾಳಾಸಾಹೇಬರ ಗೌಡಕಿಯ ವಜನಕಿನ ಬ್ಯಾರೆ, ಎಲ್ಲಿಲ್ಲದ ವಿಶೇಷ ಗೌರವವನ್ನು ಇಡೀ ಬಬಲೇಶ್ವರ ಜನ



Scanned by CamScanner

ಅವರನ್ನು ಪ್ರೀತಿಯಿಂದ, ಅಭಿಮಾನದಿಂದ, ಗೌರವದಿಂದ ನೋಡುತ್ತಿದ್ದುದನ್ನು ನಾನು ಕಣ್ಣಾರೆ ಕಂಡು ಈ ಸತ್ಯವನ್ನು ಹೇಳುತ್ತಿದ್ದೇನೆ.

ಗ್ರಾಮೀಣ ಸ್ವಚ್ಛಂದ ಪರಿಸರದಲ್ಲಿ ಹುಟ್ಟಿಬೆಳೆದು ವ್ಯಕ್ತಿತ್ವ ರೂಪಿಸಿಕೊಂಡ ಶ್ರೀ ಬಾಳಾಸಾಹೇಬರು ಮುಕ್ತಮನಸ್ಸಿನವರು ಬಸವಾದಿ ಶಿವಶರಣರ ತತ್ವಾದರ್ಶಗಳಲ್ಲಿ ಅವರಿಗೆ ಅಪಾರ ನಂಬಿಕೆ. ಅಂತೆಯೇ ಅವರು "ಇವನಾರವ ಇವನಾರವ" ಎನ್ನದೆ ಎಲ್ಲರನ್ನೂ "ಇವನಮ್ಮವ" ಎಂದು ಅಪ್ಪಿಕೊಂಡವರು ಜಾತ್ಯಾತೀತ, ಮನೋಭಾವನೆ ಹೊಂದಿದ ಶ್ರೀಯುತರು ಒಂದೆಡೆ ಮನೆತನದ ಜವಾಬ್ದಾರಿ ಇನ್ನೊಂದೆಡೆ ಸಮಾಜದ ಕರೆ ಇವೆರಡನ್ನು ತುಂಬ ಜೋಕೆಯಿಂದ ಯಶಸ್ವಿಯಾಗಿ ಸರಿದೂಗಿಸಿಕೊಂಡವರು, ಮೂಲತಃ ಸುಧಾರಣಾವಾದಿಯಾಗಿದ್ದ ಬಾಳಾಸಾಹೇಬರು ಜನರಿಗೆ ಸ್ವಾವಲಂಬನೆ ಮಹತ್ವದ ಬಗೆಗೆ ಮನವರಿಕೆ ಮಾಡಿಕೊಟ್ಟರು. ಜನರ ಆಶೋತ್ತರಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದವರು.

ಶ್ರೀ ಬಾಳಾಸಾಹೇಬ ಗೌಡರು ಸಕ್ರೀಯ ರಾಜಕಾರಣದಲ್ಲಿದ್ದರೂ ಆ ಜಂಜಡದಲ್ಲಿ ಮುಳುಗಲಿಲ್ಲ. ಜನರ-ಜನಸಾಮಾನ್ಯರ ವಿಶೇಷವಾಗಿ ಮತದಾರರ ಅಪನಂಬಿಕೆಗೆ ಪಾತ್ರರಾಗಲಿಲ್ಲ. ಜನರೊಂದಿಗೆ ಬೆರತರೂ ತಮ್ಮ ಇತಿಮಿತಿಗಳನ್ನು ಅರಿತ ಅವರು ಸಮತೋಲನವನ್ನು ಕಾಯ್ದುಕೊಂಡವರು ಅಂತೆಯೇ ರಾಜಕೀಯ ಗೌರವ ಮತ್ತು ಮನ್ನಣೆಯನ್ನು ಉಳಿಸಿಕೊಂಡರು.

ಅಂತೆಯೇ ೧೯೬೧ ರಿಂದ ೧೯೬೬ರ ವರೆಗೆ ಬಬಲೇಶ್ವರ ಗ್ರಾಮ ಪಂಚಾಯತಿ ಚೇರಮನ್‌ರಾಗಿ ಅವಿರೋಧವಾಗಿ ಆಯ್ಕೆಯಾಗಿ ಐದು ವರ್ಷಗಳ ವರೆಗೆ ಜನ ಮೆಚ್ಚುವಂತೆ ಗ್ರಾಮ ಪಂಚಾಯತಿಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಹೆಗ್ಗಳಿಕೆ ಇವರದಾಗಿದೆ. ಇವರ ಕರ್ತೃತ್ವ ಶಕ್ತಿ ಹಾಗೂ ದೂರ ದೃಷ್ಟಿಯನ್ನು ಗಮನಿಸಿದ ಬಬಲೇಶ್ವರದ ಮಹಾಜನತೆ ಪುನಃ ಮತ್ತೊಮ್ಮೆ ಗ್ರಾಮ ಪಂಚಾಯತಿಯ ಗದ್ದುಗೆಯನ್ನು ಒಪ್ಪಿಸಿ ೧೯೬೬ರಿಂದ ೧೯೭೧ರ ವರೆಗೆ ಮುಂದಿನ ಐದು ವರ್ಷದ ಅವಧಿಗೆ ಅಧಿಕಾರವನ್ನು ಪುನಃ ಅವರ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಆಯ್ಕೆ ಮಾಡಿ ಬಬಲೇಶ್ವರ ಜನತೆ ಸಂತಸಪಟ್ಟರು. ಯಾರಿಂದಲೂ ಏನನ್ನು ಅಪೇಕ್ಷಿಸದ ಯಾರ ಮೇಲೂ ಅಧಿಕಾರದ ದರ್ಪತೋರದ ನಿಸ್ಪೃಹ ವ್ಯಕ್ತಿತ್ವದ ಜನಹಿತ ಕಾಪಾಡುವ ವ್ಯಕ್ತಿಯಾದ ಶ್ರೀ ಬಾಳಾಸಾಹೇಬರನ್ನು ಪಂಚಾಯತಿ ಅಧಿಕಾರದ ಚುಕ್ಕಾಣಿಯನ್ನು ಇವರ ಕೈಗೆ ಕೊಟ್ಟು ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಬಸವಣ್ಣ, ಗಾಂಧೀಜಿಯವರ ಮಾನವೀಯ ಚಿಂತನೆಗಳನ್ನು ತಮ್ಮೆಲ್ಲ ಕೆಲಸ ಕಾರ್ಯಗಳಲ್ಲಿ ಅಳವಡಿಸಿಕೊಂಡಿದ್ದರಿಂದಲೇ ಅವರಿಂದ ಅಭಿವೃದ್ಧಿ ಸಾಧಿಸಲು ಸಾಧ್ಯವಾಯಿತು. ತಮ್ಮ ಆ ಸಹಜ ಸಾಧನೆಯನ್ನೆ ಏಣಿಯಾಗಿ ಬಳಸಿಕೊಂಡರು.

ಮತ್ತೆ ಬಬಲೇಶ್ವರದಲ್ಲಿ ಹದಿನಾಲ್ಕು ವರ್ಷಗಳ ರಾಜಕೀಯ ವನವಾಸ ಅನುಭವಿಸಿ ಶ್ರೀ ಬಾಳಾಸಾಹೇಬ ಗೌಡರು ಮತ್ತೆ ಚಾರಿತ್ರಿಕ ದಾಖಲೆಯೊಂದಿಗೆ ೧೯೮೭ ರಿಂದ ೧೯೯೧ರ ವರೆಗೆ ಮತ್ತೆ ಬಬಲೇಶ್ವರದ ಸಮಸ್ತ ನಾಗರಿಕರು ಪಕ್ಷಭೇದ, ಜಾತಿಭೇದ ಮರೆತು ಎಲ್ಲರೂ ಒಗ್ಗಟ್ಟಿನಿಂದ, ಒಮ್ಮನಸ್ಸಿನಿಂದ ಶ್ರೀ ಬಾಳಾಸಾಹೇಬ ಗೌಡರ ಮನೆಗೆ ಹೋಗಿ ಅವರಲ್ಲಿ ವಿನಂತಿಸಿಕೊಂಡು ನೀವೆ ಬಬಲೇಶ್ವರ ಪಂಚಾಯತಿಯ ಪ್ರಧಾನರಾಗಬೇಕು ಮತ್ತು ಪ್ರತಿ ವಾರ್ಡಿನಿಂದ ಒಬ್ಬೊಬ್ಬ ಯೋಗ್ಯ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಗೌಡರಿಗೆ ಒಪ್ಪಿಸಿ ಜನರು ಗೌಡರ ಮನವೊಲಿಸುವಲ್ಲಿ ಯಶಸ್ವಿಯಾಗಿ ಅವಿರೋಧವಾಗಿ ಮತ್ತೊಮ್ಮೆ ಬಬಲೇಶ್ವರ ಮಂಡಳ ಪಂಚಾಯತಿ ಪ್ರಧಾನರನ್ನಾಗಿ ಆಯ್ಕೆಮಾಡಿ ಬಬಲೇಶ್ವರ ಮಹಾಜನತೆ ಐತಿಹಾಸಿಕ ದಾಖಲೆ ನಿರ್ಮಿಸಿದರು. ಜನರ ವಿಶ್ವಾಸಕ್ಕೆ ದಕ್ಕೆ ಬರದ ಹಾಗೆ ಐದು ವರ್ಷ ಸತತ ಪರಿಶ್ರಮದಿಂದ ಆಡಳಿತ ನಡೆಸಿ ಇಡೀ ಕರ್ನಾಟಕ ರಾಜ್ಯದಲ್ಲಿಯೆ ಅತ್ಯುತ್ತಮ ಮಂಡಳ ಪಂಚಾಯತಿಯೆಂದು ಕರ್ನಾಟಕ ಸರಕಾರ ಗುರುತಿಸಿತು. ಹಾಗೆ ದೆಹಲಿವರೆಗೂ ಬಬಲೇಶ್ವರದ ಗ್ರಾಮ ಪಂಚಾಯತಿಯ ಹೆಸರು ಪಸರಿಸಿ ದೆಹಲಿ ಆಕಾಶವಾಣಿಯ ವಾರ್ತೆಗಳಲ್ಲಿ ಕೂಡ ಬಬಲೇಶ್ವರದ ಹೆಸರು ಬರುವಂತಾಯಿತು. ಇಡೀ ರಾಜ್ಯದ ಗಮನ ಸೆಳೆದ ಶ್ರೇಯಸ್ಸು ಶ್ರೀ ಬಾಳಾಸಾಹೇಬ ಗೌಡರದ್ದು. ಅವರಿಗೆ ಸಾಥನೀಡಿದ ಇಡೀ ಬಬಲೇಶ್ವರ ಮಹಾ ಜನತೆ ಹಾಗೂ ಎಲ್ಲ ಪಂಚಾಯತಿ ಸದಸ್ಯರಿಗೂ ಈ ಗೌರವ ಸಲ್ಲಬೇಕೆಂದು ಗೌಡರು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ.

ಹೀಗೆ ಸಾರ್ವಜನಿಕ ಬದುಕಿನಲ್ಲಿ ಸೈ ಎನಿಸಿಕೊಂಡ ಗೌಡರು ತಮ್ಮ ವೈಯಕ್ತಿಕ ಕೌಟುಂಬಿಕ ವಿಚಾರದಲ್ಲಿಯೂ ಅತ್ಯಂತ ಆಸ್ಥೆಯಿಂದ ಶೃದ್ಧೆಯಿಂದ ಜನ್ಮ ನೀಡಿದ ಮಕ್ಕಳನ್ನು ಒಳ್ಳೆಯ ಸಂಸ್ಕಾರವಂತರನ್ನಾಗಿ ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಿದ ಕುಟುಂಬ ವಾತ್ಸಲ್ಯರು ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಒಟ್ಟು ಐದು ಜನ ಮಕ್ಕಳು. ಅದರಲ್ಲಿ ಮೊದಲನೆಯವಳು ಅತ್ಯಂತ ಮುದ್ದಿನಿಂದ ಬೆಳೆಸಿದ ಆಶಾಲತಾ ಬಿ. ಪಾಟೀಲ ಇವರು ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿ ಬಿ.ಎಲ್.ಡಿ.ಇ. ಸಂಸ್ಥೆಯ ಪ್ರತಿಷ್ಠಿತ ಎಸ್.ಎಸ್. ಪದವಿ ಮಹಾವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಗುಣಸಂಪನ್ನರು ನಾನು ಇವರನ್ನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗಿನಿಂದಲೂ ಗಮನಿಸಿದ್ದೇನೆ. ಶಾಲೆ, ಕಾಲೇಜು, ಮನೆ ಇವು ಅಷ್ಟೆ ಇವರ ಕಾರ್ಯಕ್ಷೇತ್ರ ಯಾವತ್ತು ರಸ್ತೆಯಲ್ಲಿ ನಡುಬೀದಿಯಲ್ಲಿ ನಿಂತು ಯಾರೊಂದಿಗೂ ಮಾತನಾಡಿದನ್ನು ನಾವು ನೋಡಿಯೆ ಇಲ್ಲ. ಇವರ ಮನೆತನದ ಸಂಸ್ಕೃತಿಯ ನೆರಳಿನಲ್ಲಿಯೆ ನಡೆದವರು. ತಮ್ಮ ಮನೆತನದ ಸಂಪ್ರದಾಯದ ವಿರುದ್ಧ ಯಾವತ್ತು ನಡೆದುಕೊಂಡ ಪ್ರಸಂಗಗಳಿಲ್ಲ. ಶಾಲಾ ಕಾಲೇಜುಗಳಲ್ಲಿಯೂ ಶಿಕ್ಷಕರೊಂದಿಗೆ



Scanned by CamScanner

ಗೌರವದಿಂದಲೆ ವಿನಮ್ರತೆಯಿಂದಲೆ ನಡೆದುಕೊಂಡು ಶಾಲಾ ಗುರುಗಳ ಪ್ರೀತಿಗೆ ಗೌರವಕ್ಕೆ ಪಾತ್ರರಾದವರು. ಗುಣಸ್ವಭಾವದಲ್ಲಿ ಶುದ್ಧ ಅಪರಂಜಿ ಇದರಲ್ಲಿ ಯಾವುದೆ ಉತ್ರೇಕ್ಷತೆ ಇಲ್ಲ. ಇವರು ಬಬಲೇಶ್ವರ ಗೌಡರ ಮನೆತನಕ್ಕೆ ಗೌರವತಂದವರು ಇವರು ಸಿಂದಗಿಯ ಗೌರವಯುತ ಮನೆತನದ ಬಿ.ಇ. ಪದವೀಧರರಾದ ಶ್ರೀ ನಾನಾಸಾಹೇಬಗೌಡ ಪಾಟೀಲ, ಇವರೊಂದಿಗೆ ವಿವಾಹವಾಗಿ ಸಿಂದಗಿಯ ಗೌಡರ ಮನೆಯ ಸೊಸೆಯಾಗಿ ಅವರ ಮನೆಯ ಬೆಳಗಿದ ಮಹಾಲಕ್ಷ್ಮಿ ಇವರ ಕೈಹಿಡಿದ ಪತಿರಾಯ ನಾನಾಗೌಡ್ರು ಬಿ.ಎಲ್.ಡಿ.ಇ. ಸಂಸ್ಥೆಯ, ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇಂದು ಅವರು ನಮ್ಮೊಂದಿಗಿಲ್ಲ. ಇವರಿಗೆ ಮೂರು ಜನ ಮಕ್ಕಳು ಅನುಪಮಾ, ನಿರುಪಮಾ ಎಂಬ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ ಪ್ರದೀಪ ಇಂಜಿನೀಯರಿಂಗ್‌ದಲ್ಲಿ ಎಂ.ಎಸ್. ಓದುತ್ತಿದ್ದಾನೆ. ಹಿರಿಯ ಮಗಳು ಇಂಜಿನೀಯರಿಂಗ್‌ದಲ್ಲಿ ಎಂ.ಎಸ್. ಮಾಡಿ ಮಗಳು ಅಳಿಯ ಇರ್ವರು ಅಮೇರಿಕಾದಲ್ಲಿ ಒಂದು ಒಳ್ಳೆಯ ಕಂಪನಿಯಲ್ಲಿದ್ದಾರೆ. ಎರಡನೆಯ ಮಗಳು ಮತ್ತು ಅಳಿಯ ಇಬ್ಬರು ಮೆಡಿಕಲ್‌ನಲ್ಲಿ ಎಂ.ಡಿ. ಮಾಡಿ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಇದಕ್ಕೆಲ್ಲ ಅವರ ಅಜ್ಜನವರಾದ ಬಾಳಾಸಾಹೇಬಗೌಡರ ಒಳ್ಳೆಯ ಮಾರ್ಗದರ್ಶನದ ಸೂಕ್ತ ಸಲಹೆ ಸೂಚನೆಗಳೆ ಕಾರಣ ಹಾಗೂ ಆಶಾಲತಾ ಅವರ ಪರಿಶ್ರಮ ಅವರ ಚಿಕಿತ್ಸಕ ಬುದ್ಧಿಯಿಂದ ಇದೆಲ್ಲ ಅವರಿಗೆ ಸಾಧ್ಯವಾಗಿದೆ.

ಇನ್ನೂ ಎರಡನೆಯ ಮಗಳು ಶ್ರೀಮತಿ ಕೃಷ್ಣಾಬಾಯಿ ಬಾಳಾಸಾಹೇಬಗೌಡರ ತಾಯಿಯ ಹೆಸರನ್ನು ಇವರಿಗೆ ಇಡಲಾಗಿದೆ. ಇವರು ಗೌಡರಿಗೆ ಮಾತೃಸ್ವರೂಪಿಯಾಗಿ ಕಂಡಿದ್ದಾರೆ. ಇವರನ್ನು ಅತ್ಯಂತ ಪ್ರೀತಿಯಿಂದ ಬೆಳೆಸಿದ್ದಾರೆ. ಬೆಳಗಾವಿಯ ಪ್ರತಿಷ್ಠಿತ ಗದಗ ಎಂಬ ಮನೆತನದ ಶ್ರೀ. ಮೋಹನ ಅವರ ಜೊತೆ ವಿವಾಹವಾಯಿತು. ಇವರು ಚೀಫ ಇಂಜಿನೀಯರಾಗಿದ್ದಾರೆ. ಇವರ ಮಾವನವರು ಪ್ರಸಿದ್ಧ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದಾರೆ. ಕೃಷ್ಣಾಬಾಯಿಗೆ ಇಬ್ಬರು ಗಂಡು ಮಕ್ಕಳು. ಮೊದಲನೆಯ ಮಗ ಚೇತನ. ಈತ ಬಿ.ಇ. ಪದವೀಧರ, ಇನ್ನೋರ್ವ ಮಗ ಸಚಿನ ಈತನು ಬಿ.ಇ. ಪದವಿ ಮುಗಿಸಿ ಸದ್ಯ ಇವರೀರ್ವರು ಮಕ್ಕಳು ಬೆಂಗಳೂರಿನ ಪ್ರತಿಷ್ಠಿತ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರದು ಒಳ್ಳೆಯ ಸುಸಂಸ್ಕೃತ ಮನೆತನ. ಈ ಮನೆಯ ಸೊಸೆಯಾಗಿ ಆದರ್ಶ ಗೃಹಿಣಿಯಾಗಿ ಶ್ರೀಮತಿ. ಕೃಷ್ಣಾಬಾಯಿಯವರು ಮನೆಗೆ ಬೆಳಕಾಗಿ ಬಂದು ಮಂದಾರ ಪುಷ್ಪದಂತೆ ಅರಳಿ ಆದರ್ಶ ಗೃಹಿಣಿಯಾಗಿ ಎಲ್ಲರ ಮನಗೆದ್ದ ಮಹಾಮಾತೆಯಾಗಿದ್ದಾರೆ.

ಮಲ್ಲನಗೌಡ ಬಾಳಾಸಾಹೇಬಗೌಡ ಪಾಟೀಲ ಉರ್ಫ ರಾಜೇಂದ್ರ ಪಾಟೀಲ ಇವರು ಇಬ್ಬರು ಹೆಣ್ಣು ಮಕ್ಕಳ ನಂತರ ಮೂರನೆಯವನಾಗಿ ಅಪರೂಪದ



Scanned by CamScanner

ಮಗನಾಗಿ ಜನಿಸಿದನು. ಈತನು ಕೂಡಾ ಅತ್ಯಂತ ಸಾತ್ವಿಕ ಸ್ವಭಾವದ ವಿನೀತಭಾವದ ಸರಳ ಸಜ್ಜನಿಕೆಯ ತಂದೆಯ ಸನ್ಮಾರ್ಗದಲ್ಲಿ ನಡೆಯುತ ಎಂ.ಟೆಕ್ ಪದವೀಧರನಾದ ರಾಜೇಂದ್ರ ಸಧ್ಯ ಕೊಂಕಣ ರೇಲ್ವೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹುಬ್ಬಳ್ಳಿಯ ಚಂದನವರ ಮನೆಯ ಹೆಣ್ಣು ಮಗಳು ಸರೋಜಾದೇವಿ ಇವರ ಧರ್ಮಪತ್ನಿಯಾಗಿ ಇವರ ಮನೆಯನ್ನು ಮತ್ತು ಇವರ ಮನವನ್ನು ತುಂಬಿದ್ದಾರೆ. ಇವರಿಗೆ ಆದಿತ್ಯ ಎಂಬ ಗಂಡು ಮಗನಿದ್ದಾನೆ. ಸದ್ಯ ಆತ ಪಿ.ಯು.ಸಿ. ಓದುತ್ತಿದ್ದಾನೆ. ರಾಜೇಂದ್ರವರು ತಮ್ಮ ಮನೆತನದ ಸಂಪ್ರದಾಯವನ್ನು ಚಾಚುತಪ್ಪದೆ ಆಚಾರ ವಿಚಾರಗಳನ್ನು ರೂಢಿಸಿಕೊಂಡು ತಮ್ಮ ಮನೆತನದ ಗೌರವ ಆಧಾರಗಳಿಗೆ ಯಾವುದೆ ರೀತಿ ಕಳಂಕ ಬರದ ಹಾಗೆ ಅವರು ಯಾರ ಅವಕೃಪೆಗೆ ಒಳಗಾಗದೆ ಗೌರವಯುತ ಬದುಕನ್ನು ನಡೆಸುತ್ತಿದ್ದಾರೆ. ತಮ್ಮ ತಾಯಿ, ತಂದೆ, ಬಂಧು-ಬಳಗ, ಸಮಾಜದ ಗುರು-ಹಿರಿಯರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಿದ್ದಾರೆ.

ನಾಲ್ಕನೆಯವಳಾಗಿ ಶ್ರೀಮತಿ ವಿನೋದಾ ಬಾಳಾಸಾಹೇಬಗೌಡರ ಪಾಟೀಲರ ಅತ್ಯಂತ ಹೆಮ್ಮೆಯ ಮಗಳಾಗಿ ಜನ್ಮ ತಳೆಯುತ್ತಾಳೆ. ಇವಳು ತುಂಬಾ ಚುರುಕಾದ ಮತ್ತು ತೀಕ್ಷ್ಣ ಬುದ್ಧಿಯುಳ್ಳ ಸಂವೇದನಾಶೀಲ ಮಗಳಾಗಿದ್ದಾಳೆ. ಇವಳು ಬಿ.ಎಸ್.ಸಿ. ಪದವೀಧರೆ. ಇನ್ನೂ ಉನ್ನತ ವ್ಯಾಸಂಗ ಮಾಡಬೇಕೆಂಬ ಬಲವಾದ ಆಸೆಯಿತ್ತು, ಆದರೆ ತಂದೆ-ತಾಯಿಯ ಇಚ್ಛೆಯಂತೆ ಹಾಗೂ ಕರ್ಮ-ಧರ್ಮ ಸಂಯೋಗದಿಂದ ಮದುವೆ ನಿಶ್ಚಿತಾರ್ಥವಾಗುತ್ತದೆ. ಬಾಗಲಕೋಟ ಜಿಲ್ಲೆಯ ಪ್ರತಿಷ್ಠಿತ ರಾಜಕೀಯ ಮನೆತನದ ಶ್ರೀ ಪಿ. ಎಂ. ನಾಡಗೌಡರ ಮಗನಾದ ಇಂಜಿನೀಯರಿಂಗ ಪದವೀಧರರಾದ ಶ್ರೀ. ಮೋಹನ ನಾಡಗೌಡರೊಂದಿಗೆ ವಿನೋದಾಳ ಮದುವೆ ಜರುಗುತ್ತದೆ. ಇವರ ದಾಂಪತ್ಯ ಜೀವನ ಸುಂದರಮಯವಾಗಿದೆ, ಸುಖಮಯವಾಗಿದೆ. ಇವರಿಗೆ ಇಬ್ಬರು ಗಂಡು ಮಕ್ಕಳು. ಮೊದಲನೆಯ ಮಗ ನಿಖಿಲ ಎಂ. ನಾಡಗೌಡರ ಈತ ಎಂ. ಎಸ್. ಆಗಿ ಅಮೇರಿಕಾದಲ್ಲಿ ಇಂಜಿನೀಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾನೆ. ಎರಡನೆಯ ಮಗ ನೇಹಾಲ ಎಂ. ನಾಡಗೌಡರ ಈತನು ಎಂ.ಬಿ.ಬಿ.ಎಸ್. ಓದಿ ಎಂ.ಡಿ. ಓದುತ್ತಿದ್ದಾನೆ, ಪ್ರಜ್ವಲ ಎಂ. ನಾಡಗೌಡ ಈತ ಬಿ.ಇ. ಓದುತ್ತಿದ್ದಾನೆ. ಈ ಮೂವರು ಜನ ಮಕ್ಕಳು ಅತ್ಯಂತ ಗೌರವಾಧಾರಗಳಿಂದ ತಮ್ಮ ಮನೆತನದ ಹಿರಿಯರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಇದು ಅವರ ಅಜ್ಜ-ಅಜ್ಜಿಗೆ ಸಲ್ಲಬೇಕಾದ ಗೌರವ. ನಮ್ಮ ಉತ್ತರ ಕರ್ನಾಟಕದ ಮನೆಮಾತಾಗಿರುವ ಶ್ರೀ ನಾಡಗೌಡರ ಮನೆತನ ವತನಕಿಯ ಮನೆತನ ಏಳು ಊರಿನ ಗೌಡಕಿ ಇವರಿಗಿತ್ತು. ಶ್ರೀ. ಪಿ. ಎಂ. ನಾಡಗೌಡರು ಸಚಿವರಾಗಿದ್ದಾಗ ಬಹಳಷ್ಟು ಜನರಿಗೆ ಸರಕಾರಿ ಉದ್ಯೋಗ ಕೊಡಿಸಿ, ಬಡಜನರ ಬಾಳಿಗೆ ಬೆಳಕಾಗಿದ್ದಾರೆ. ಇಂತಹ ಪ್ರತಿಷ್ಠಿತ ಮನೆತನದ ಸೊಸೆಯಾಗಿ ನಾಡಗೌಡರ ಮನೆ ತುಂಬಿದ ಭಾಗ್ಯವಂತೆ



Scanned by CamScanner

ಶ್ರೀಮತಿ ವಿನೋದಾ ಅವರು. ಶ್ರೀಮತಿ. ವಿನೋದಾ ಅವರು ತಂದೆಗೆ ತಕ್ಕ ಮಗಳಾಗಿ ತಂದೆಯ ಮುಡಿಗೆ ಹೂವು ತರುವ ಮಗಳಾಗಿದ್ದಾಳೆ.

"ಸಮುದ್ರವಸನೇದೇವಿ ಪರ್ವತ ಸ್ತನ ಮಂಡಿತೆ, ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ" ಭೂಮಿಯನ್ನು ತಾಯಿ ಎಂದವರು ನಾವು, ಭೂಮಿಯನ್ನು ದೇವಿ ಎಂದವರು ನಾವು, ಭೂದೇವಿಯ ಕೃಪೆಗಾಗಿ ಆರಾಧನೆ ಮಾಡಿದವರು ನಾವು, ಭೂದೇವಿಯ ಅನುಕಂಪದ ಆಶೀರ್ವಾದಕ್ಕೆ ಕಾತುರರಾಗಿ ದೀನರಾಗಿ ಪ್ರಾರ್ಥಿಸಿದವರು ನಾವು. ಭೂಮಿಯನ್ನು ಕೇವಲ ಉತ್ಪಾದನೆಯ ಸಾಧನವಾಗಿ ನಾವು ಕಾಣಲಿಲ್ಲ. ಎಲ್ಲ ಹಳ್ಳ, ಕೊಳ್ಳ, ಸಾಗರ, ಬೆಟ್ಟ, ಗುಡ್ಡ, ಪರ್ವತಗಳಿಂದ ಅಲಂಕೃತಳಾದ ವಿಷ್ಣು ಪತ್ನಿ ಅವಳು. ಅವಳ ಗರ್ಭದಲ್ಲಿ ಅನುರ್ಘ್ಯರತ್ನಗಳು ಸೇರಿ ಎಲ್ಲ ಲವಣಗಳಿವೆ. ಭೂದೇವಿ ಹರಿಸಿದರೆ ಸಾಕು ನಮ್ಮಲ್ಲಿ ಸಮೃದ್ಧಿ ಬರುತ್ತದೆ. ಅವಳೇ ಸಂತಸ ಹರಿಸುವ ದಯಾಮಯಿ ಎಂದು ನಂಬಿ ನಡೆದವರು ಅದೆ ಹಾದಿಯಲ್ಲಿ ಕೃಷಿಯನ್ನೆ ತನ್ನ ಜೀವನದ ಉಸಿರಾಗಿಸಿಕೊಂಡು ಅಶೋಕ ಬಾಳಾಸಾಹೇಬಗೌಡರಿಗೆ ಕೊನೆಯ ಮಗನಾಗಿ ಮನೆಯ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ತಂದೆಯವರ ಸೂಕ್ತ ಮಾರ್ಗದರ್ಶನದಲ್ಲಿ ಮನೆತನದ ಜವಾಬ್ದಾರಿಯನ್ನು ಹೊತ್ತುಕೊಂಡು ನಡೆದಿದ್ದಾರೆ. ಇವರ ಅರ್ಧಾಂಗಿನಿಯಾಗಿ ಜಂಬಗಿಯ ದೇಸಾಯಿ ಮನೆತನದ ಶ್ರೀಮತಿ ಶೈಲಜಾ ಪತಿರಾಯನ ಹೆಗಲಿಗೆ ಹೆಗಲಕೊಟ್ಟು ಕುಟುಂಬ ನಿರ್ವಹಣೆ ಮಾಡುತ್ತಾ ಎಲ್ಲರಿಂದ ಸೈ ಎನಿಸಿಕೊಂಡಿದ್ದಾರೆ. ಹೀಗೆ ಬಾಳಾಸಾಹೇಬಗೌಡರ ಮನೆತನ ಅತ್ಯಂತ ಸುಸೂತ್ರವಾಗಿ ಸಾಗುತ್ತಿರುವುದಕ್ಕೆ ಗೌಡರಿಗೆ ತುಂಬಾ ಹೆಮ್ಮೆ ಇದೆ. ಎಲ್ಲ ಮಕ್ಕಳು ಶ್ರದ್ಧೆಯಿಂದ, ನಿಷ್ಠೆಯಿಂದ, ಭಕ್ತಿಯಿಂದ ಮನೆತನದ ಗೌರವವನ್ನು ಇಮ್ಮಡಿಗೊಳಿಸಿದ್ದಾರೆ. ಎಲ್ಲ ಹೆಣ್ಣುಮಕ್ಕಳು ತಮ್ಮ ತಮ್ಮ ಮನೆಯಲ್ಲಿ ಅತ್ಯಂತ ಸಂತೋಷದಿಂದ ಗೌರವಯುತ ನೆಮ್ಮದಿಯ ಜೀವನವನ್ನು ನಡೆಸುತ್ತಿರುವುದು ಗೌಡರಿಗೆ ತೃಪ್ತಿ ತಂದಿದೆ. ಅಶೋಕ ಅವರಿಗೆ ಸುದರ್ಶನ ಎಂಬ ಮಗನಿದ್ದಾನೆ. ಸದ್ಯ ಈತ ಬೆಳಗಾವಿಯಲ್ಲಿ ಎಂ.ಸಿ.ಎ. ಓದುತ್ತಿದ್ದಾನೆ.

ಗೌಡರ ಮನೆತನದಲ್ಲಿ ಅನೇಕ ರೂಢಿ, ಪದ್ಧತಿಗಳು, ಸಂಪ್ರದಾಯಗಳು ಇವೆಲ್ಲವನ್ನು ಚಾಚೂತಪ್ಪದೆ ಇವರ ಮಕ್ಕಳೂ ಅನುಸರಿಸಿಕೊಂಡು ಬಂದಿದ್ದಾರೆ. ಇವರ ಮನೆತನ ಘೋಷಾ ಪದ್ಧತಿಯ ಮನೆತನ ಇವರ ಮನೆಯ ಹೆಣ್ಣು ಮಕ್ಕಳು ಎಲ್ಲಿಯಾದರೂ ಊರು, ಕೇರಿ, ಹಬ್ಬ ಹರಿದಿನಗಳಲ್ಲಿ ಪ್ರಯಾಣಿಸಬೇಕೆಂದರೆ, ಸವಾರಿ ಎತ್ತಿನ ಬಂಡಿ ಅಥವಾ ಕಾರು ಗಾಡಿಯಲ್ಲಿ ಹೋಗಬೇಕು. ಬೇರೆ ಯಾವ ಪರಪುರುಷರ ತಮ್ಮ ಮನೆಯ ಹೆಣ್ಣುಮಕ್ಕಳ ಮೇಲೆ ದೃಷ್ಟಿ ಬೀಳಬಾರದು. ಇಂತಹ ಕಠಿಣ ಸಂಪ್ರದಾಯ, ಆಚಾರ-ವಿಚಾರಗಳನ್ನು ಅತ್ಯಂತ ನಿಷ್ಠೆಯಿಂದ ಅನುಸರಿಸಿಕೊಂಡು ಬಂದಿರುವುದು ಗೌರವದ ಪ್ರತೀಕ. ಇಂದಿನ ಆಧುನಿಕ ನಾಗರಿಕ



Scanned by CamScanner

ಜಗತ್ತಿನಲ್ಲಿ ಸಾಧ್ಯವಿಲ್ಲದಂತಹ ಪದ್ಧತಿಗಳನ್ನು ಸಂಪ್ರದಾಯಗಳನ್ನು ಅನುಸರಿಸಿ ಮನೆತನದ ಗೌರವವನ್ನು ಗೌಪ್ಯತೆಯಿಂದ ಅನುಸರಿಸಿಕೊಂಡು ಬಂದಿರುವುದು ಬಬಲೇಶ್ವರ ಗೌಡರ ಮನೆತನಕ್ಕೆ ಮುಕುಟಪ್ರಾಯವಾಗಿದೆ.

ಹೀಗೆ ಹಲವಾರು ವಿಶೇಷತೆಗಳನ್ನು ಹೊಂದಿದ ಬಬಲೇಶ್ವರ ಗೌಡರ ಮನೆತನದ ಕುರಿತಾಗಿ ನನಗೆ ತಿಳಿದ ಒಂದೆರಡು ವಿಚಾರಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವ ಸದಾವಕಾಶವನ್ನು ಒದಗಿಸಿಕೊಟ್ಟ ಅಭಿನಂದನಾ ಗ್ರಂಥ ಸಮಿತಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ.

■■



Scanned by CamScanner